SIR M. VEERAPPA MOILY (Ministor for Education and parliamentary Affairs): I introduce:

Karnataka Legislature Salaries, Pensions and Allowances (Ammendment) Bill, 1990"

MR. SPEAKER: The bill is introduced.

THE KARNATAKA LEAGISLATURE SALARIES, PENSIONS AND ALLOWANCES (AMENDMENT BILL, 1990.

(LEAVE TO INTRODUCE)

SRI M. VEERAPPA MOILY (Minister for Education and Parliamentary Affairs) (on behalf of Chief Minister) Sir,

I beg to move:

"The leave be granted to introduce the Karnataka Legislature Salaries, Pensions and Allowances (Ammendment) Bill, 1990"

MR SPEAKER: The question is:

"That leave be granted to introduce the Karnataka Ministers' Salaries and Allowances (Amendment) Bill, 1990".

The motion was adopted and leave was granted

SRI M. VEERAPPA MOILY (Minister for Education and Parliamentary Affairs) (On behalf of Chief Minister): Sir,

I introduce:

"The Karnataka Minsiters' Salary and Allowances (Amendment) Bill, 1990."

MR. SPEAKER: The Bill is introduced.

ಶ್ರೀ ಎಂ ವೀರಪ್ಪ ಮೋಯಿಲಿ : ಈಗ ಆರು ಬಿಲ್ಲುಗಳನ್ನು ಇವತ್ತು ಮೊದಲು ತೆಗೆದುಕೊಂಡು ಆಮೇಲೆ ಜಿಲ್ಲಾ ಪರಿಷತ್ತಿಗೆ ಸಂಬಂಧಪಟ್ಟಂಥ ಮಸೂದೆ ಮೇಲಿನ ಚರ್ಚೆಯನ್ನು ಮುಂದುವರಿಸಬಹುದು ಎಂದು ಹೇಳಿ ತಮ್ಮ ಹತ್ತಿರ ಅನುಮತಿಯನ್ನು ಕೋರುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಸೂದೆಗಳ ಚರ್ಚೆಗೆ ನಮ್ಮದೇನೂ ವಿರೋಧ ಇಲ್ಲ ಚರ್ಚೆಯನ್ನು ಮಾಡೋಣ. ಜಿಲ್ಲಾ ಪರಿಷತ್ತಿನ ಸ್ಥಿತಿ ಏನಾಯಿತು ಎಂದು ನೋಡಬೇಕಲ್ಲಾ ಮಾನ್ಯ ಮಂತ್ರಿಗಳೂ ಬಂದಿಲ್ಲ. (ಸಂಬಂಧ ಪಟ್ಟ ಮಂತ್ರಿಗಳು ಸದನದಲ್ಲಿ) ಕೂಡಾ ಇಲ್ಲಾ.

ಅಧ್ಯಕ್ಷರು : ಜಿಲ್ಲಾ ಪರಿಷತ್ತು ಯಾಥಾಸ್ಥಿತಿಯಲ್ಲಿದೆ. ಆದರಲ್ಲಿ ಬದಲಾವಣೆಗಳು ಆಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಶಾಸನಸಭೆಯನ್ನು ಮುಂದುವರಿಸಿ 26 ಮತ್ತು 27ನೇ ತಾರೀಖಿಗೆ ಶಾಸನಸಭೆಯನ್ನು ಕರೆದ ಉದ್ದೇಶವೇ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಮಸೂದೆಯ ಚರ್ಚೆ ಮತ್ತು ಅನುಮೋದನೆಗೋಸ್ಕರ.

ಅಧ್ಯಕ್ಷರು : ಅದು ಒಂದು ಉದ್ದೇಶ.

ಶ್ರೀ ಡಿ.ಬಿ. ಚಂದ್ರೇಗೌಡ : ಮುಖ್ಯವಾದ ಉದ್ದೇಶವೇ ಅದು.

ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯೊಳಗೆ ಹಿಂದಿನ ಸಾರಿ ಚರ್ಚೆ ಮಾಡಿದಾಗ ಈ ತಾರೀಖುಗಳನ್ನು ನಿಗದಿ ಮಾಡಿದ ಉದ್ದೇಶ ಚರ್ಚೆ ಹೆಚ್ಚು ಸಮಯ ಬೇಕು ಮುಂದೆ ಚರ್ಚೆ ಮಾಡೋಣ ಎಂಬ ಉದ್ದೇಶದಿಂದ ತೀರ್ಮಾನ ಮಾಡಿದ್ದು ಈಗ ಮಂತ್ರಿಗಳು ಇಲ್ಲ ಮಸೂದೆ ಚರ್ಚೆಗೂ ಅವಕಾಶವಿಲ್ಲ, ಅಂದಮೇಲೆ ಅದರ ಗತಿ ಏನಾಯಿತು ಎಂಬುದು ನಮಗೆ ಗೊತ್ತಾಗಬೇಕಲ್ಲಾ ಏಕೆಂದರೆ ನಾವು ಇಲ್ಲಿ ಬಹಳ ಜನ ಸದಸ್ಯರುಗಳು ಚರ್ಚೆಗೆ ತಯಾರಾಗಿ ಬಂದಿದ್ದೇವೆ.

ಅಧ್ಯಕ್ಷರು : ತಯಾರಾಗಿ ಬಂದಿರುವವರಿಗೆಲ್ಲ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎಂ ವೀರಪ್ಪ ಮೋಯಿಲಿ : ನಮ್ಮ ವಿರೋಧ ಪಕ್ಷದ ನಾಯಕರ ಕಳವಳ ಏನೆಂದರೆ ನಾವೇನಾದರೂ ಈ ಚರ್ಚೆಯನ್ನು ಮೊಟಕುಗೊಳಿಸಿ ಏನಾದರೂ ಅವಾಂತರ ಮಾಡುತ್ತೇವೆಂದಿದ್ದರೆ ಅಂತಹದ್ದು ಏನೂ ಇಲ್ಲ

ಅಧ್ಯಕ್ಷರು : ಇಲ್ಲಿ ಅವಾಂತರ ಮಾಡುವುದಿಲ್ಲ.

ಶ್ರೀ ಎಂ ವೀರಪ್ಪ ಮೋಯಿಲಿ : ಇದು ಪೂರ್ತಿ ಚರ್ಚೆ ಆಗಬೇಕು ಎಂಬುದೇ ನಮ್ಮ ಉದ್ದೇಶ ಏಕೆಂದರೆ

ಅಧ್ಯಕ್ಷರು : ಅವರು ಹೇಳುವುದನ್ನು ಸ್ವಲ್ಪ ಕೇಳಿ

ಎಂ ವೀರಪ್ಪ ಮೋಯಿಲಿ : ಈ ಮಸೂದೆಯು ಬಹಳ ಪ್ರಾಮುಖ್ಯವಾದಂತದು ಇದು ಈ ಕರ್ನಾಟಕ ರಾಜ್ಯದ ಗ್ರಾಮೀಣ ಜನತೆಯ ಸ್ಥಿತ್ಯಂತರವನ್ನು ನಿರ್ಣಯ ಮಾಡತಕ್ಕ ಒಂದು ಮಸೂದೆ ಆಗಿದೆ ಅಲ್ಲಿ ಅಮೂಲಗ್ರವಾದಂತಹ ಬದಲಾವಣೆಯಾಗಬೇಕು ಇದನ್ನು ನಾವು

ಶ್ರೀ ಹೆಚ್. ಏಕಾಂತಯ್ಯ : ನೀವು 17ನೇ ತಾರೀಖೆ ಆ ಮಾತನ್ನು ಹೇಳಿದ್ದರೆ ಒಪ್ಪುತ್ತಿದ್ದೆವು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನೇ ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ ಅದುದರಿಂದ ಈ ಮಸೂದೆ ಬಗ್ಗೆ ಎಷ್ಟು ಸಮಯ ನಿಗದಿ ಪಡಿಸುತ್ತಿರೋ ಅಷ್ಟು ಸಮಯ ಕೊಡಿ ಪರವಾಗಿಲ್ಲ. ಅದಕ್ಕೆ ನಾವು ಒಪ್ಪುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ವಿಚಾರದಲ್ಲಿ ಪ್ರಾರಂಭದ ದಿವಸದಲ್ಲಿಯೇ ಹೇಳಿದ್ದೇವೆ ಮಂತ್ರಿಗಳನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ್ದಾಗಲೂ ಹೇಳಿದ್ದೇನೆ.

ಶಾಸನಸಭೆಯಲ್ಲಿಯೂ ಹೇಳಿದ್ದೇವೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿಯೂ ಕೂಡ ಹೇಳಿದ್ದೇವೆ. ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಬೇಕು. ಎಂದು ಹೇಳಿದ್ದೇವೆ. ಆದರೆ ಅವಸರವಸರವಾಗಿ ಈ ಮಸೂದೆಯನ್ನು ಮಂಡನೆ ಮಾಡಿ ಇವತ್ತು ಅದಕ್ಕೆ ಹೆಚ್ಚಿನ ಚರ್ಚೆ ಬೇಕು ಅನ್ನತಕ್ಕ ಬುದ್ದಿ ಅವರಿಗೆ ಬಂದಿದ್ದಕ್ಕಾಗಿ ನಾನು

ಸರ್ಕಾರವನ್ನು ಅಭಿನಂಧಿಸುತ್ತೇನೆ. ಆದರೆ ಕಾನ್‌ಫಿಕಿಯಸ್ ಆಗಿ ಮಾನ್ಯ ಮಂತ್ರಿಗಳು ಸದನಕ್ಕೆ ಬಂದಿಲ್ಲ. ಇಂದಿನ ಪತ್ರಿಕೆಯಲ್ಲಿ ವರದಿಯಾದಂತೆ ಮಾನ್ಯ ಬಸವಲಿಂಗಪ್ಪನವರು ಅಂದರೆ ಸಂಬಂಧಪಟ್ಟ ಮಂತ್ರಿಗಳು ನಿನ್ನೆ ನಡೆದಂತಹ ಮಂತ್ರಿಮಂಡಲದ ಸಭೆಗೆ ಹೋಗಲಿಲ್ಲವೆಂದು ತಿಳಿದು ಬಂದಿದೆ. ಬೇರೆ ಯಾವುದೊ ಒಂದು ಸಭೆಯಲ್ಲಿ ಪಾಲ್ಗೊಂಡಿದ್ದರೆಂದು ಬಂದಿದೆ. ಅವರು ಏನಾದರೂ ರಾಜೀನಾಮೆ ಕೊಡಬೇಕೆಂಬ ಆಲೋಚನೆ ಮಾಡಿದ್ದಾರಾ? ಸರ್ಕಾರ ಇದರ ಬಗ್ಗೆ ಏನು ನಿಲುವು ತೆಗೆದುಕೊಂಡಿದೆ? ಏಕೆಂದರೆ ಗೌರವದಿಂದ ಇರತಕ್ಕವರು ಯಾರಾದರೂ ನೈತಿಕ ಹೊಣೆ ಹೊತ್ತು ಜವಾಬ್ದಾರಿಯನ್ನು ಹೊತ್ತಿಕೊಂಡಿರತಕ್ಕವರು ತಮ್ಮ ವೈಫಲ್ಯವನ್ನು ತಮ್ಮ ಪಕ್ಷದ ಸದಸ್ಯರನ್ನು ಮೆಚ್ಚಿಸಲು ಸಾಧ್ಯವಾಗಲಿಲ್ಲ ಅನ್ನತಕ್ಕದ್ದನ್ನು ಗಮನಿಸಿ ತಮ್ಮ ಮಂತ್ರಿಮಂಡಲವನ್ನು ಒಪ್ಪಿಲು ಸಧ್ಯವಾಗಲಿಲ್ಲ ಎಂದು ಗಮನಿಸಿ ತಮಗೆ ದೆಹಲಿಯಿಂದ ಬಂದಿದ್ದಂತಹ ನಿರ್ದೇಶನದ ಪ್ರಕಾರ ಕೊನೆಗೂ ತಲೆಬಾಗುವಂತಹ ಪ್ರಸಂಗವನ್ನು ತಂದುಕೊಂಡು ಆ ಮಂತ್ರಿಗಳು ಸಭೆಗೆ ಬರದೇ ಇರುವುದನ್ನು ನೋಡಿದರೆ ನನ್ನ ಮನಸ್ಸಿಗೆ ಏನು ಅನ್ನಿಸುತ್ತದೆಂದರೆ ಅವರು ಏನಾದರೂ ರಾಜೀನಾಮೆ ಕೊಟ್ಟಿದ್ದಾರೋ ಏನೋ ಅಂದು, ಕೊಡದೆ ಇದ್ದರೆ ಕೊಡಬೇಕಾಗುತ್ತದೆ. ಸ್ವಲ್ಪವಾದರೂ ನೈತಿಕ ಹೊಣೆಗಾರಿಕೆ ಎನ್ನುವಂತಹ ಜವಾಬ್ದಾರಿ ಇರುವಂತಹ ಅಥವಾ ಮಂತ್ರಿಮಂಡಲದಲ್ಲಿರತಕ್ಕ ಜಂಟಿ ಜವಾಬ್ದಾರಿಯನ್ನು ಒಪ್ಪಿಕೊಳ್ಳತಕ್ಕದ್ದು ಇದ್ದರೆ ಅವರು ರಾಜೀನಾಮೆ ಕೊಟ್ಟು ಮುಂದಕ್ಕೆ ಹೋಗಬೇಕು.

ಅಧ್ಯಕ್ಷರು : ಅವರು ವಿಸ್ತಾರವಾಗಿ ಚರ್ಚೆ ಆಗಬೇಕು ಅಂತ ಹೇಳಿದರೆ ನೀವು ಅವರ ರಾಜಿನಾಮೆಯನ್ನು ಕೇಳುತ್ತಿರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಏಕೆಂದರೆ ವಿಸ್ತಾರವಾಗಿ ಚರ್ಚೆಯಾಗಬೇಕೆಂದು ನಾವು ಪ್ರಾರಂಭದಿಂದ ಹೇಳುತ್ತಿದ್ದೇವೆ.

ಅಧ್ಯಕ್ಷರು : ಈಗ ಒಪ್ಪಿದರೆ ಏನು, ಕೊನೆಯಲ್ಲಿ ಒಪ್ಪಿದರೆ ಏನು, ಒಪ್ಪಿಗೆ ತಾನೆ ಮುಖ್ಯ. ನಾವು ಸರ್ಕಾರದ ಬಗ್ಗೆಯೂ ಕೂಡ ಬಹಳ ಫೇರ್ ಆಗಿ ಇರಬೇಕಾಗುತ್ತದೆ. ಈ ಮಸೂದೆಯನ್ನು ಆತುರಾತುರವಾಗಿ ಮುಗಿಸಬೇಕು. ಅನ್ನತಕ್ಕ ಮನೋನಿಷ್ಠೆ ಅವರಲ್ಲಿ ಇದ್ದಿದ್ದರೆ ನೀವು 500 ನಿಮಿಷಗಳ ಕಾಲ ಭಾಷಣವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಹೌದೋ ಇಲ್ಲವೋ ಅಷ್ಟನ್ನು ಹೇಳಿ ಅದೇ ಧ್ಯೋತಕವಾಗುತ್ತದೆ. ಅವಸರ ಮಾಡಬೇಕೆಂಬ ಮನೋಭಾವ ಅವರಿಗೂ ಸಹ ಮೊದಲಿನಿಂದಲೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮನ್ನು ಶಾಸನಸಭೆಯನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ಗಣನೆಗೆ ತೆಗೆದುಕೊಂಡು they should take the House into confidence.

Mr. SPEAKER : They are taking the House into confidence.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದ ನಾಯಕರು ಯಾವ ಒಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ನನಗನ್ನಿಸುತ್ತದೆ, ಈ ಸಭೆ ಇವತ್ತು ಮುಕ್ತಾಯವಾಗುತ್ತದೆ ಎಂದು. ಈ ಸದನದ ಸಲಹಾ ಸಮಿತಿಯ ಒಂದು ತೀರ್ಮಾನದ ಪ್ರಕಾರ ಈ ಸಭೆ ಇವತ್ತು ಮುಗಿಸಬೇಕಾದರೆ ಸಾಯಂಕಾಲ

6 ಗಂಟೆ ಆಗಬಹುದು ಅಥವಾ ರಾತ್ರಿ 7 ಗಂಟೆ ಆಗಬಹುದು ಇಲ್ಲವೇ ರಾತ್ರಿ 8 ಗಂಟೆ ಆಗಬಹುದು.

ಅಧ್ಯಕ್ಷರು : ಇವತ್ತು ಮುಗಿಸಬೇಕಾದರೆ ಇಲ್ಲವೇ ರಾತ್ರಿ 8ಗಂಟೆ ಆಗಬಹುದು ರಾತ್ರಿ 12 ಗಂಟೆಯಾಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೂ ಮೊದಲು ಮತ್ತೆ ಏನಾದರೂ ಸಲಹಾ ಸಮಿತಿಯ ಸಭೆಯಲ್ಲಿ ತಾವು ಕರೆಯುವುದಕ್ಕೆ ಯೋಚನೆ ಮಾಡಿದ್ದೀರಾ? ಏಕೆಂದರೆ ಇದರ ಬಗ್ಗೆ ಬಹಳ ವಿಶಾಲವಾಗಿ ಬಹಳ ಗಂಭೀರವಾಗಿ ಇದರ ಬಗ್ಗೆ ಚರ್ಚೆ ನಡೆಯಬೇಕೆಂದು ಅವರು ಔದಾರ್ಯ ತೋರಿಸುತ್ತಿದ್ದಾರೆ.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) ಇಲ್ಲಿ ಔದಾರ್ಯವೆಂದರೆ ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸನ್ಮಾನ್ಯ ಸದಸ್ಯರುಗಳು ಬಹಳ ಆತುರರಾಗಿದ್ದರು. ಏನೆಂದರೆ ಅವಸರದಿಂದ ಈ ಬಿಲ್ಲನ್ನು ಪಾಸ್ ಮಾಡಬೇಡಿ. ಇದರಿಂದ ದೊಡ್ಡ ಅನಾಹುತವಾಗುತ್ತದೆ ಎಂದು ಈಗ ಆತುರತೆಯಿಂದ ಈ ಬಿಲ್ಲನ್ನು ಪಾಸ್ ಮಾಡಿ ಇಲ್ಲದಿದ್ದರೆ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಇದು ಒಂದು ರೀತಿಯ ದ್ವಂದ್ವ ಆಗಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ಬಿಲ್ಲಿನಿಂದ ಸರ್ಕಾರಕ್ಕೆ ಅನಾಹುತವಾಗಿಬಿಡುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ವಿರೋದ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು ಅದು ನೈತಿಕತೆಯ ಪ್ರಶ್ನೆ ನಮ್ಮ ನೈತಿಕತೆಯ ಪ್ರಶ್ನೆ ಬದ್ಧವಾಗುತ್ತದೆಯೇ ಹೊರತು ಒಣ ಪ್ರತಿಷ್ಠೆಗೆ ಬದ್ಧವಾಗುವ ಪಕ್ಷ ನಮ್ಮದಲ್ಲಿ ಸಿದ್ಧಾಂತಕ್ಕೆ ಹೊಂದಿಕೊಂಡ ಪಕ್ಷ ನಮ್ಮದು ಸಿದ್ಧಾಂತದ ಬಗ್ಗೆ ನಮಗೆ ಏನಾದರೂ ವೈಫಲ್ಯತೆ ಬಂದರೆ yes we must own that responsibility. ಆದರೆ ಈಗ.....

ಶ್ರೀ ಬಿ.ಎಸ್ ಯಡಿಯೂರಪ್ಪ : ಇವತ್ತು ಈ ಬಿಲ್ ಬಗ್ಗೆ ಚರ್ಚೆ ನಡೆಯುತ್ತಿರುವುದನ್ನು ನೋಡಿ ಜನ ನಗುತ್ತಿದ್ದಾರೆ. ನೀವು ಹಿರಿಯ ಮಂತ್ರಿಗಳಾಗಿ ಹೀಗೆ ಹೇಳಿದರೆ ಹೇಗೆ? ಇದ ಯಾವ ಸಿದ್ಧಾಂತ?

ಶ್ರೀ ಎಂ. ವೀರಪ್ಪ ಮೊಯಿಲಿ : ತಾವೆಲ್ಲರೂ ಮಾತನಾಡುತ್ತಿರುವ ಧಾಟಿ ನೋಡಿದರೆ ಅನುಕೂಲ ಸಿಂಧು ಈ ಕಡೆಯೇ ಆ ಕಡೆಯೇ ಎಂದು ಜನರೇ ಅರ್ಥಮಾಡಿಕೊಳ್ಳುತ್ತಾರೆ ಏಕೆಂದರೆ ಇವತ್ತು ಈ ಬಿಲ್ಲನ್ನು ಆತುರತೆಯಿಂದ ಪಾಸ್ ಮಾಡಿ ಎಂದು ಹೇಳುತ್ತಿದ್ದೀರಿ. ಇದರಲ್ಲಿ ರಾಜಕೀಯ ಪ್ರತಿಷ್ಠೆ ತಮ್ಮದು ಕಾಣುತ್ತಿದೆಯೇ ಹೊರತು ಸಿದ್ಧಾಂತದ ಪ್ರತಿಷ್ಠೆ ನಮಗೇನೂ ಕಾಣುತ್ತಿಲ್ಲ. ಇವತ್ತು ನಿಮಗೆ ಸಿದ್ಧಾಂತದಲ್ಲಿ ಭಾಧ್ಯತೆ ಇದ್ದು ಸಿದ್ಧಾಂತದಲ್ಲಿ ವಿಶ್ವಾಸವಿದ್ದಲ್ಲಿ, ನಮ್ಮ ಕಡೆಯಿಂದ ಯಾವ ತರಹದ ಚ್ಯುತಿ ಬರಬಾರದೆಂದು ನಾವು ಇದರ ಬಗ್ಗೆ ವ್ಯಾಪಕವಾದ ಚರ್ಚೆಯಾಗಬೇಕೆಂದು ನಿಲುವು ತೆಗೆದುಕೊಂಡರೆ ವ್ಯಾಪಕವಾದ ಚರ್ಚೆಯಾಗಬಾರದೆಂದು ನೀವು ಪ್ರತಿಷ್ಠೆಯಿಂದ ಹೇಳತಕ್ಕಂಥ ಮಾತು ಏನಿದೆ ಇದು ಯಾವ

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ ಎಂದು ಕೇಳಿದ ಉದ್ದೇಶವೇ ವ್ಯಾಪಕವಾದ ಚರ್ಚೆಯಾಗಲಿ ಎಂದು ಆ ರೀತಿ ಮಾಡುತ್ತೀರಾ? ಇದರಲ್ಲಿ ಪ್ರತಿಷ್ಠೆ ಏನಿದೇ? ಈಗ ಒಣ ಪ್ರತಿಷ್ಠೆಯನ್ನು ಬಿಟ್ಟಿದ್ದೇವೆಂದು ಹೇಳಿದ್ದಾರೆ ಬಹಳ ಸಂತೋಷ.

ಅಧ್ಯಕ್ಷರು : ಶ್ರೀ ಯಡಿಯೂರಪ್ಪನವರೇ ಈಗ ಸರ್ಕಾರದ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ವಿರೋಧ ಪಕ್ಷದ ಸದಸ್ಯರೆಲ್ಲರೂ ಸೇರಿ ಜನತೆಯ ಹಿತದೃಷ್ಟಿಯಿಂದ ಒಂದಾಗಿ ಸರ್ಕಾರದ ಕೈ ಬಲಪಡಿಸಿದ್ದೇವೆ. ಆದರೆ ಈ ಬಿಲ್ಲನ್ನು ಯಾವ ರೀತಿ ತಂದಿದ್ದರೋ ಅದೇ ರೀತಿ ಪಾಸ್ ಮಾಡಿದ್ದರೆ ಆಡಳಿತ ಪಕ್ಷದ ಸದಸ್ಯರು ತಮ್ಮ ಕ್ಷೇತ್ರಗಳಿಗೆ ಹೋದಾಗ ಜನ ಮಚ್ಚು ತೆಗೆದುಕೊಂಡು ಅವರ ಬೆನ್ನು ಹತ್ತುತ್ತಿದ್ದರು. ಆ ರೀತಿ ಈ ಬಿಲ್ಲಿಗೆ ತಿದ್ದುಪಡಿ ತಂದಿದ್ದೀರಿ ಹಿಂದೆ ತಮ್ಮ ಕೊಠಡಿಯಲ್ಲಿ ಸಹ ಸನ್ಮಾನ್ಯ ಮುಖ್ಯ ಮಂತ್ರಿಯವರ ಸಮಕ್ಷಮದಲ್ಲಿ ಈ ಬಿಲ್ ಬಗ್ಗೆ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಈ ಬಿಲ್ಲನ್ನು ಯಾವ ರೀತಿ ತಂದಿದ್ದೀರೋ ಅದೇ ರೀತಿ ಪಾಸ್ ಮಾಡಿ ಜನರನ್ನು ಎದುರಿಸಿ ಆಗ ಗೊತ್ತಾಗುತ್ತದೆ ಎಂದು ನಾನು ಹೇಳಿದ್ದೆ.

(ಗೊಂದಲ)

ಅಧ್ಯಕ್ಷರು : ಆರ್ಡರ್ ಆರ್ಡರ್ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು ನಾನು ಯಾರನ್ನೂ ಕರೆದಿಲ್ಲ. ಈಗ ಶ್ರೀ ಕಾಗೋಡ್ ತಿಮ್ಮಪ್ಪನವರು ಮಾತನಾಡುಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ ನಾವು ಸಣ್ಣ ಮಕ್ಕಳೇನೂ ಅಲ್ಲ ಈ ಮಸೂದೆಯ ಮೇಲೆ ಚರ್ಚೆ ಪ್ರಾರಂಭವಾಗಿದೆ. ಇವತ್ತು ಕಾರ್ಯಕ್ರಮದ ಪಟ್ಟಿಯಲ್ಲಿ ಚರ್ಚೆಗೆ ಒಳಪಡಿಸಿದಂಥ ವಿಷಯ ಪರಿಷತ್ತಿನ ಮಸೂದೆ ನಮಗೆ ತಿಳಿದಿರುವ ಪ್ರಕಾರ ಈ ಸದನದಲ್ಲಿ ಈ ಮಸೂದೆಯನ್ನು ತೀರ್ಮಾನ ಮಾಡಬೇಕೆಂದು ಇತ್ತು. ಸರ್ಕಾರಕ್ಕೆ ತೊಂದರೆ ಏನಾದರೂ ಇದ್ದರೆ ಅದನ್ನು ಹೇಳಿಕೊಳ್ಳುವುದು ಒಳ್ಳೆಯದು. ಈ ಸದನದಲ್ಲಿ ನಾವು ಚರ್ಚೆಮಾಡುವುದಿಲ್ಲ ಮುಂದೆ ಹಾಕುತ್ತೇವೆಂದು ಹೇಳಲಿ. Let there be a fair concealment. ಈಗ ಚರ್ಚಯಲ್ಲಿರತಕ್ಕಂಥ ಮಸೂದೆಯನ್ನು ನಮಗೆ ಇರತಕ್ಕಂತಹ ತೊಂದರೆಯನ್ನು ಹೇಳಿಕೊಳ್ಳದೇ ಮುಂದೆ ಹಾಕತಕ್ಕಂದಾದ್ದು ಸರಿಯಲ್ಲ. ಏಕೆಂದರೆ ಶಾಸಕಾರಾಗಿ ನಾವು ಇಲ್ಲಿ ಕೆಲಸಮಾಡುತ್ತಿದ್ದೇವೆ. ವಿರೋಧಪಕ್ಷ ಇರಬಹುದು ಆಡಳಿತಪಕ್ಷ ಇರಬಹುದು ನಮಗೆ ಈ ಬಗ್ಗೆ ಏನೂ ಗೊತ್ತಿಲ್ಲ. ಆದ್ದರಿಂದ ಸರ್ಕಾರಕ್ಕೆ ತೊಂದರೆ ಇದ್ದರೆ ಆ ತೊಂದರೆಯನ್ನು ಈ ಸದನದ ಮುಂದೆ ಹೇಳಿಕೊಂಡರೆ ಅದರ ಪ್ರಕಾರವಾಗಿ ಚರ್ಚೆಯನ್ನು ಹಾಕಿಕೊಳ್ಳಬಹುದು ಏನೂ ಸಕಾರಣ ಇಲ್ಲದೆ ಅಜೆಂಡಾದಲ್ಲಿರತಕ್ಕದ್ದನ್ನು ನಾವು ಮುಂದೆ ಹಾಕಿ ಬೇರೆ ತೆಗೆದುಕೊಳ್ಳೋಣ ಅಂದರೆ ನಮಗೆ ಏನೂ ಇದರಲ್ಲಿ ಪಾತ್ರ ಇಲ್ಲ ನಾವು ಏನು ನಿರ್ವಹಿಸಬೇಕು ಆ ಬಗ್ಗೆ ನಮ್ಮ ರಕ್ಷಣೆಗೆ ಅಧ್ಯಕ್ಷರು ಬರಬೇಕು.

ಅಧ್ಯಕ್ಷರು : ನನಗೆ ಯಡಿಯೂರಪ್ಪನವರು ಅವಕಾಶ ಕೊಟ್ಟರೆ ನಿಮ್ಮ ರಕ್ಷಣೆಗೆ ನಾನು ಬರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ಬೇರೆ ಬೇರೆ ಕಾರಣಗಳಿಂದ ಅನಿವಾರ್ಯವಾಗಿ ನಾನು ಮಾತನಾಡಲಿಕ್ಕೆ ಆಗಿರಲಿಲ್ಲ ಇಂದು ಅವಕಾಶ ಸಿಗಬಹುದು ಆಗ ನಾನು ಮಾತನಾಡಿ ನನ್ನ ಅಭಿಪ್ರಾಯಗಳನ್ನು ತಿಳಿಸುತ್ತೇನೆ.

ಶ್ರೀ ಬನ್ನಿಕೋಡ್ : ಅಧ್ಯಕ್ಷರೇ ನಾನು ಇದರ ಬಗ್ಗೆ ಮಾತನಾಡಬೇಕಾಗಿದೆ

ಅಧ್ಯಕ್ಷರು : ನಿಮಗೂ ಅವಕಾಶ ಕೊಡುತ್ತೇನೆ. ಮಾನ್ಯ ಬನ್ನಿಕೋಡ್ ಅವರಿಗೂ ಅವಕಾಶ ಕೊಡುತ್ತೇನೆ. ಈಗ ಕಾಗೋಡು ತಿಮ್ಮಪ್ಪನವರು ಮೂಲಭೂತವಾದಂಥ ಪ್ರಶ್ನೆಯನ್ನು ತಂದಿದ್ದಾರೆ. ಸಂಸದೀಯ ವ್ಯವಹಾರಗಳ ಸಚಿವರು ಒಂದು ಸೂಚನೆಯನ್ನು ಸದನದ ಅನುಮತಿಗೆ ಕೇಳಿದ್ದಾರೆ. ಅದು ಏನೆಂದರೆ ಈ ಜಿಲ್ಲಾಪರಿಷತ್ ತಿದ್ದುಪಡಿ ವಿಧೇಯಕಕ್ಕೆ ಇನ್ನೂ ಬಹಳ ಮಂದಿ ಸದಸ್ಯರು ಆ ಚರ್ಚೆಯಲ್ಲಿ ಭಾಗವಹಿಸಬೇಕಾಗಿರುವುದರಿಂದ ಅದು ಇವ್ಹೊತ್ತು ಮುಕ್ತಾಯ ವಾಗವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಕೆಲವು ಸಣ್ಣ ಮಸೂದೆಗಳು ವಾದಗ್ರಸ್ತ ಮಸೂದೆಗಳಲ್ಲ ಸರ್ವಾನುಮತದಿಂದ ಒಪ್ಪಿಗೆ ಬಹಬಹುದು ಎನ್ನುತಕ್ಕದ್ದು ಇದೆ ಆದ್ದರಿಂದ ಆ ಮಸೂದೆಗಳನ್ನು ಮುಗಿಸಿ ಅನಂತರ ವ್ಯಾಪಕವಾದಂಥ ಸಮಗ್ರವಾದಂಥ ಮೂಲಭೂತವಾದಂಥ ಚರ್ಚೆ ಈ ಜಿಲ್ಲಾಪರಿಷತ್ ವಿಧೇಯಕದಮೇಲೆ ನಡೆಯಬೇಕೆಂದು ಸೂಚನೆ. ಈ ಸೂಚನೆಗೆ ಸಭೆ ಅಂಗೀಕಾರ ಕೊಟ್ಟರೆ ನಾವು ಮೊದಲು ಈ ಸಣ್ಣ ತಿದ್ದುಪಡಿ ಮಸೂದೆಗಳನ್ನು ಮುಗಿಸಿ ಅನಂತರ ಜಿಲ್ಲಾಪರಿಷತ್ ಮಸೂದೆ ತೆಗೆದುಕೊಳ್ಳಬಹುದು ಈಗ ಮಾನ್ಯ ಜಾಲಪ್ಪನವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ ಈ ಎಂಟು ಬಿಲ್ಲುಗಳು ಏನಿವೆ ಆ ಬಗ್ಗೆ ನಾವು ನಿರ್ವಿವಾದವಾಗಿ ಒಪ್ಪಿಕೊಳ್ಳುತ್ತೇವೆ. ಅದರಲ್ಲಿ ಕೆಲವು ಅಮೆಂಡ್‌ಮೆಂಟ್ಸ್ ಲ್ಯಾಂಡ್ ರೆವಿನ್ಯೂ ಬಗ್ಗೆ ಇದೆ ಅದರ ಬಗ್ಗೆ ಸ್ವಲ್ಪ ಚರ್ಚೆಮಾಡಿ ಒಪ್ಪಿಕೊಳ್ಳುತ್ತೇನೆ. ಈ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಮಸೂದೆ it is a dead horse now, ther is no meaning in beating the dead horse.

ಅಧ್ಯಕ್ಷರು : ಅದು ಇನ್ನೂ ಪೂರ್ತಿಯಾಗಿ ಪಾಸಾಗಲು ಮೂರು ಸಾರಿ ಹೇಳಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಒಣ ಪ್ರತಿಷ್ಠೆ ಮೇಲೆ ನಾವೂ ನಿಲ್ಲುವುದು ಬೇಡ, ಅವರೂ ಸಹ ನಿಲ್ಲುವುದು ಬೇಡ. ಇವ್ಹೊತ್ತು ನಾವು ಇವರು ಬಿಲ್ ಪಾಸ್ ಮಾಡುವುದಿಲ್ಲ ಎಂದು ಹೇಳಿ ಕ್ರಿಟಿಸೈಸ್ ಮಾಡುವುದು ಬೇಕಾಗಿಲ್ಲ. It is definite that a further amendments are going to be brought on the amendments proposed already. It is sure. ಅದಕ್ಕೋಸ್ಕರ ಈ ಬಿಲ್‌ಗೋಸ್ಕರ ಸುಮ್ಮನೆ ಕಾಲ ವ್ಯಯ ಮಾಡುವುದು ಬೇಡ. Can you pass the bill now? Come on. I know it is not possible. ಆದ್ದರಿಂದ ಸಿಕ್ಕಾಪಟ್ಟೆ ನಾವು ಸಮಯ ವೇಸ್ಟ್‌ಮಾಡುವುದು ಬೇಡ. ತಾವು ಯಾವಾಗ ತರುತ್ತೀರಿ ಎಂದು ಹೇಳಿ ಈಗ ನಾವು ಹೇಳುವುದೆಲ್ಲಾ ಹೇಳಿದ್ದೇವೆ. ಈ ತಾವು ಈ ಬಿಲ್ ಪಾಸ್ ಮಾಡುವುದಿಲ್ಲ ನಮಗೆ ಗೊತ್ತಿದೆ. ಈಗ ಸಮಯ ವೇಸ್ಟ್‌ಮಾಡುವ ಬದಲು you come forward and say that we will pass the bill. We will give you another two months time.

SRI M. VEERAPPA MOILY : The amendment Bill is before you. Are you going to pass it unanimously?

SRI R.L. JALAPPA : You have got majority....

(Interruptions)

ಶ್ರೀ ಆರ್.ವಿ. ದೇಶಪಾಂಡೆ : ಈಗ ಪ್ರಿಸ್ಟಿಜ್ ಮೇಲೆ ನಿಲ್ಲುವುದು ಬೇಡ. ಮಾನ್ಯ ಕಾಗೋಡು ತಿಮ್ಮಪ್ಪನವರು ನೇರವಾಗಿ ಸರ್ಕಾರ ಚರ್ಚೆಗೆ ಏತಕ್ಕೆ ತಯಾರಿಲ್ಲ ಎಂದು ಕೇಳಿದ್ದಾರೆ. ಅವರು ಕೇಳುವುದಕ್ಕೆ ಉತ್ತರ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಅವರ ಅಭಿಪ್ರಾಯ.

ಅಧ್ಯಕ್ಷರು : ಸರ್ಕಾರ ತಯಾರಾಗಿಲ್ಲ ಅಂತ ಅವರು ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಇವೊತ್ತು ಚರ್ಚೆ ಆಗುವುದಾದರೆ, ರಾತ್ರಿ ಹನ್ನೆರಡು ಗಂಟೆಯಾಗಲಿ, we are prepared to sit but on their assurance that they will get their bill passed today.

ನಾವು ಬಿಲ್ ಪಾಸ್ ಮಾಡುತ್ತೇವೆಂದು ಹೇಳಲಿ. we are prepared to sit today till 12 O'clock, or else why should we waste our time?

ಅಧ್ಯಕ್ಷರು : ಶಾಸನಸಭೆಗಳ ಇತಿಹಾಸದಲ್ಲಿ ಇಂಥ ದಿವಸವೇ ನಾವು ಈ ಮಸೂದೆ ಪಾಸ್ ಮಾಡುತ್ತೇವೆಂದು ಯಾರು ಕ್ಯಾಲೆಂಡರ್ ಇಟ್ಟುಕೊಂಡು ಹೇಳಲಿಕ್ಕೆ ಆಗುವುದಿಲ್ಲ ನಾವು ನೀವು ಕಳೆದ 30 ವರ್ಷಗಳಿಂದೂ ಇದನ್ನು ನೋಡಿದ್ದೇವೆ. ಆದ್ದರಿಂದ...

11.00 ಎ.ಎಂ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಿನ್ನೆ ಮಾನ್ಯ ಮೊಯಿಲಿಯವರು ಒಂದು ಮಾತನ್ನು ಹೇಳಿದ್ದರು. ಇವತ್ತು ಏನು ಈ ವಿಚಾರವನ್ನು ಹೇಳುತ್ತಿದ್ದಾರೆ ಇದನ್ನು ನಿನ್ನೆ ದಿವಸ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ನಿಮ್ಮಿಂದ ಆದೇಶ ಬಂದಿದೆ. ತಾವು ಡೆಫರ್ ಮಾಡುತ್ತಿದ್ದೀರಿ. ನಿಮ್ಮ ಪಕ್ಷದ ಅಧ್ಯಕ್ಷರು ಹೀಗೆ ಹೇಳಿದ್ದಾರೆಂದು ಪ್ರಾಮಾಣಿಕವಾಗಿ ಹೇಳಿ ಆದರಲ್ಲೇನಿದೆ?

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಾಲಪ್ಪನವರ ಮಾತನ್ನು ನಾನು ಕೇಳಿದ್ದೇನೆ. ನಿನ್ನೆಯ ದಿವಸ ಏನು ನಾವು ನಿಲುವನ್ನು ತೆಗೆದುಕೊಂಡಿದ್ದೆವೋ ಇವತ್ತೂ ಅದೇ ನಿಲುವೇ. ಅದರಲ್ಲಿ ಏನೂ ಬದಲಾವಣೆ ಇಲ್ಲ, ಇವತ್ತು ನಾವು ಏನು ತಿದ್ದುಪಡಿಯನ್ನು ತಂದಿದ್ದೇವೋ, ಇದು ಇವತ್ತಲ್ಲ, ನಾಳೆ ಅಲ್ಲ, ನಾಡಿದ್ದಾದರೂ ಇದು ಆಗಲೇಬೇಕು. ಆಗಿಯೇ ಆಗುತ್ತದೆ. ಇದನ್ನು ಮಾಡಬೇಕೆಂಬುದು ನಮ್ಮ ಪಕ್ಷದ ನಿಲುವು. ಮಾನ್ಯ ಅಧ್ಯಕ್ಷರು ಹೇಳಿದಂತೆ ಇವತ್ತೇ ಮುಗಿಸುತ್ತೇವೆ, ನಾಳೆಯೇ ಮುಗಿಸುತ್ತೇವೆಂದು ನಿರ್ಬಂಧ ಏತಕ್ಕೆ, ಇವತ್ತು

ಎಲ್ಲ ಪಕ್ಷದವರೂ ಒಂದಾಗಿ ಈ ಸದನದಲ್ಲಿ ಯಾವುದೇ ಭಿನ್ನಾಭಿಪ್ರಾಯವೂ ಇಲ್ಲದೆ ಒಪ್ಪಿಕೊಳ್ಳುತ್ತೇವೆಂದು ಹೇಳಿ...

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ...

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಬನ್ನಿಕೋಡ್‌ರವರು, ಮಾನ್ಯ ಕೌಜಲಗಿಯವರು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುತ್ತಾರೆ. ಮಾನ್ಯ ಸದಸ್ಯರ ಮಾತನ್ನು ಕೇಳಬೇಕೆಂದು ನನಗೆ ಇಷ್ಟ. ಆದರೆ ಈ ರೀತಿ 3-4 ಜನರು ಒಂದೇ ಸಲ ಎದ್ದು ನಿಂತುಕೊಂಡು....

ಅಧ್ಯಕ್ಷರು : ಕೌಜಲಗಿಯವರೇ ಇದು ಸರಿಯಲ್ಲ. ಮಾನ್ಯ ಮಂತ್ರಿಗಳು ಈಲ್ಡ್ ಆದರೆ ಅವರ ಸಮಯವನ್ನು ನೀವು ಉಪಯೋಗಿಸಿಕೊಳ್ಳಬಹುದು. ಆದರೆ ಅವರು ಈಲ್ಡ್ ಆಗದೇ ಇರುವಾಗ ನೀವು ಮಧ್ಯೆ ಎದ್ದು.....

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಬನ್ನಿಕೋಡ್‌ರವರಂತೂ ಒಂದು ದಿವಸವೂ ಮಾತನಾಡುವುದಿಲ್ಲ. ಆದರೆ ಈಗ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುತ್ತಿದ್ದಾರೆ. ಇದು ಏತಕ್ಕೆ ತಾವು ಸಭೆಯ ನಿಯಮಾವಳಿಗಳನ್ನು ಸ್ವಲ್ಪ ತೆಗೆದುನೋಡಿ. ನಾನು ಈಗಾಗಲೇ ಹೇಳಿದ್ದೇನೆ. ಇದು ಶತಃ ಸಿದ್ಧ. ಇದರ ಬಗ್ಗೆ ತಾವು ತರ್ಕ ಮಾಡಿ. ಇದರ ಬಗ್ಗೆ ಚರ್ಚೆ ಆಗಲಿ. ಆಮೇಲೆ ಸಾಯಂಕಾಲ ನಾವು ಏನು ಹೇಳಬೇಕೋ ಅದನ್ನು ಹೇಳುತ್ತೇವೆ. ಅದನ್ನು ಬಿಟ್ಟು ನೀವು ಈಗಲೇ ಹೇಳಿ, ನಿಮಗೆ ಏನೋ ನಿರ್ದೇಶನ ಬಂದಿದೆ ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ ನಮಗೇನೂ ನಿರ್ದೇಶನ ಬಂದಿಲ್ಲ, ನಾವೂ, ನೀವೂ ಕೂತು ಮಾತನಾಡೋಣ. ನಮಗೂ ಸ್ವಲ್ಪ ಸಂಶಯ ಬಂದಿದೆ. ಇದರ ಬಗ್ಗೆ ನಾವು ಒಂದೆರಡು ವಿಚಾರಗಳನ್ನು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ. ನಾನು ನೇರವಾಗಿ ಮಾತನಾಡಿದ್ದೇನೆ. ನನಗೂ ಸ್ವಲ್ಪಮಟ್ಟಿಗೆ ಇರತಕ್ಕ ಸಂಶಯ ನಿವಾರಣೆಯಾಗಬೇಕಾಗಿದೆ. ಇವತ್ತು ಮುಗಿಸುತ್ತೇವೆ ಎಂದು ನಾವೇ ಹೇಳಿದ್ದೇವೆ. ಆದರೆ ಇದರ ಬಗ್ಗೆ ಇವತ್ತು ಸ್ವಲ್ಪ ಚರ್ಚೆ ಮಾಡಬೇಕೆಂದು ಮನಸ್ಸು ಬಂದಿದೆ. ದಯವಿಟ್ಟು ಮೊದಲು ಚರ್ಚೆಮಾಡಿ, ಅನಂತರ ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ನಾವು ಚರ್ಚೆಮಾಡಿ ಪುನಃ ಅದನ್ನು ತಮಗೆ ತಿಳಿಸುತ್ತೇವೆ. ತಮಗೆ ಚಿಂತೆ ಬೇಕಾಗಿಲ್ಲ. ಈ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ, ಇನ್ನೊಂದು ಬೇರೆ ತಿದ್ದುಪಡಿ ತರುತ್ತೇವೆಂದು ಹೇಳುವುದು ಯಾವುದೂ ಉಳಿದಿಲ್ಲ. ಈಗ ರಾಜ್ಯಾಂಗದ 64ನೇ ತಿದ್ದುಪಡಿಯ ಪ್ರಕಾರವೇ ನಾವು ಮಾಡಿದ್ದೇವೆ. ಅವರಿಗೆ ಏನು ಅಧಿಕಾರವನ್ನು ಕೊಡಬೇಕಾಗಿತ್ತೋ ಅದನ್ನು ಕೊಡುವುದಕ್ಕಾಗುವುದಿಲ್ಲ. ಇದು ಪಾಸ್ ಆದಮೇಲೆ ಅಧಿಕಾರವನ್ನು ಕೊಡುವುದಕ್ಕೆ ನಾವು ಯಾವೊತ್ತು ಸಿದ್ಧವಾಗಿದ್ದೇವೆ. ಅನಂತರ ಇನ್ನೊಂದು ತಿದ್ದುಪಡಿ ಮಸೂದೆಯನ್ನು ತರುತ್ತೇವೆ. ಅದನ್ನೂ ಕೂಡ ಅಳವಡಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಅದು ಪಾಸ್ ಆಗುವವರೆಗೂ ನಾವು 64ನೇ ತಿದ್ದುಪಡಿಯನ್ನು ಮಾಡುವುದಕ್ಕಾಗುವುದಿಲ್ಲ.

ಆದ್ದರಿಂದ ನಾನು ಏನು ಹೇಳುತ್ತಿದ್ದೇನೆಂದರೆ ರಾಜ್ಯಾಂಗ ತಿದ್ದುಪಡಿ ಏನಿದೆ ಅದರಂತೆ ಒಂದು ಹೊಸ ಲಿಸ್ಟ್ ಮಾಡಿದ್ದಾರೆ. ಆ ಲಿಸ್ಟ್ ಇದರಲ್ಲಿ ಸೇರಬೇಕೆ ಬೇಡವೇ ಎನ್ನುವುದು ಒಂದು ಪ್ರಶ್ನೆ. 64ನೇ ರಾಜ್ಯಾಂಗದಲ್ಲಿ ಒಂದು ಲಿಸ್ಟ್

ಮಾಡಿದ್ದಾರೆ. ಸೆವೆನ್ತ್ ಷೆಡ್ಯೂಲ್ ಎಂದು ಏನು ಮಾಡಿದ್ದಾರೆ. ಸ್ಟೇಟ್ ಲಿಸ್ಟ್, ಸೆಂಟ್ರಲ್‌ಲಿಸ್ಟ್, ಕನೆಕರೆಂಟ್ ಲಿಸ್ಟ್ ಎಂದು ಮಾಡಿರುವಂತೆ ಈ ಪಂಚಾಯತಿಗಳಿಗೂ ಒಂದು ಲಿಸ್ಟ್ ಮಾಡಿದ್ದಾರೆ. ಆ ಹೊಸ ಷೆಡ್ಯೂಲ್ ಅನ್ನು ಸೇರಿಸಬೇಕೆ, ಬೇಡವೇ ಎನ್ನುವ ಪ್ರಶ್ನೆ. ಇವತ್ತು ನಾವು ಸೇರಿಸಿಲ್ಲ. ಅದಕ್ಕಾಗಿ ಆ ಒಂದು ಕಾರ್ಯವ್ಯಾಪ್ತಿ ಏನಿದೆ, ಅದನ್ನು ಇದರಲ್ಲಿ ಸೇರಿಸಬೇಕೆ ಬೇಡವೆ ಎನ್ನುವ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದೆ. ಇದು ನಮ್ಮ ಉದ್ದೇಶವಾಗಿದೆ, ಮಾನ್ಯ ವಿರೋಧಪಕ್ಷದ ನಾಯಕರ ಉದ್ದೇಶ ಕೂಡ ಅದೇ ಇರಬಹುದು. ಷೆಡ್ಯೂಲ್ ಸೇರಿಸಬೇಕೆ ಬೇಡವೆ ಎನ್ನುವುದು. ನಾವು ಇದರಲ್ಲಿ ಸೇರಿಸಿಲ್ಲ, ಆದ್ದರಿಂದ ನನ್ನ ಪ್ರಾರ್ಥನೆ ಮಾನ್ಯ ಸದಸ್ಯರೆಲ್ಲರೂ ಇದರಲ್ಲಿ ಭಾಗಿಯಾಗಬೇಕು. ಏನೆಂದರೆ ಇದನ್ನು ಚರ್ಚೆ ಮಾಡಲು 15ದಿವಸಗಳ ಆಗಬಹುದು ಅಥವಾ ಒಂದು ತಿಂಗಳಾಗಬಹುದು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ ನನಗನಿಸುತ್ತದೆ. ನನ್ನ ಭಾವನೆಯಲ್ಲಿ ಪುನಃ ಅಮೆಂಡ್‌ಮೆಂಟ್ ಏನು ತಂದಿದ್ದಾರೆ ಅದಕ್ಕೆ ಮತ್ತೆ ಅಮೆಂಡ್‌ಮೆಂಟ್ ತರುತ್ತಿದ್ದೀರಿ. ಅದು ನಮಗೂ ಅವಶ್ಯಕತೆ ಇದೆ, ನಿಮಗೂ ಅವಶ್ಯಕತೆ ಇದೆ, ತನ್ನಿ ಬಹಳ ಸಂತೋಷ ಅದರ ಅವಶ್ಯಕತೆ ನಮಗೂ ಇದೆ ನಿಮಗೂ ಇದೆ. ತಮ್ಮ ಮುಖಂಡರೇ ಹೇಳಿರಬಹುದು ಅಥವಾ ತಾವೇ ಮನಸ್ಸು ಮಾಡಿರಬಹುದು. ಆದರೆ ನಮಗೆ ಬೇಕಾಗಿರುವುದು ರಿಸಲ್ಟ್. ಅದಕ್ಕೆ ತಾವು ಹೆಚ್ಚು ಕಡಿಮೆ ಹತ್ತಿರ ಹತ್ತಿರ ಬರುತ್ತಿದ್ದೀರಿ. ಆದ್ದರಿಂದ ಇದರ ಬಗ್ಗೆ ಪುನಃ ಚರ್ಚೆಮಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ನೀವು ಏನು ಅಮೆಂಡ್‌ಮೆಂಟ್ ತರುತ್ತೇವೆಂದು ಹೇಳುತ್ತೀದ್ದೀರಿ, ಇವತ್ತು ತರುತ್ತೀರಾ ನಾಳೆ ತರುತ್ತೀರಾ ಅಥವಾ ಮುಂದಿನ ಸೆಷನ್‌ನಲ್ಲಿ ತರುತ್ತೀರಾ ಹೇಳಿ ಅದರ ಮೇಲೆ ಮಾತನಾಡೋಣ. ಅದಕ್ಕೋಸ್ಕರವಾಗಿ ಲೇಟ್ ಮಾಡುವುದು ಬೇಡ. ಇದು ನನ್ನ ಸಬ್‌ಮಿಷನ್. ಇದರ ಬಗ್ಗೆ ತೀರ್ಮಾನ ತೆಗದುಕೊಳ್ಳುವುದನ್ನು ತಮಗೇ ಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಆದರೆ ನನ್ನ ಸಲಹೆ ಏನೆಂದರೆ ತಿದ್ದುಪಡಿಯ ಮೇಲೆ ತಿದ್ದುಪಡಿ. ಈಗ ಮತ್ತೆ ಪುನಃ ತಿದ್ದುಪಡಿಯ ಮೇಲೆ ತಿದ್ದುಪಡಿ, ಈ ಗೊಂದಲಕ್ಕಿಂತ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಿ. ಏತಕ್ಕೆಂದರೆ ಯಾವುದಕ್ಕೆ ತಿದ್ದುಪಡಿ ತಾವು ಬಯಸಿದ್ದೀರೋ ನಿಖರವಾಗಿ ಬಯಸಿದ್ದೀರೋ, ಅದನ್ನು ಒಂದು ಫಾರಂನಲ್ಲಿ ತಂದರೆ ಮುಂದೆ ಅದರ ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುತ್ತವೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ತಾವು ಹೇಳಿದ್ದನ್ನು ಅವರು ಗಮನದಲ್ಲಿಟ್ಟುಕೊಳ್ಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರದು ಒಳ್ಳೆಯ ಸಲಹೆ.

ಶ್ರೀ ಸಿ. ಬೈರೇಗೌಡ : ಈ ತಿದ್ದುಪಡಿ ಬಹಳ ಗೊಂದಲದಲ್ಲಿದೆ, ಯಾವುದಕ್ಕೆ ಯಾವುದು ತಿದ್ದುಪಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ನಮಗೆ ನಿಖರವಾದ ಸ್ಪಷ್ಟತೆ ಸಿಕ್ಕಿತು. ತಮ್ಮ ಮೂಲಕ ನನ್ನ ಸಲಹೆ ಏನೆಂದರೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ವಿವರವಾಗಿ ಚರ್ಚೆ ನಡೆಸಬೇಕೆಂದು

ಹೇಳುತ್ತೇನೆ. ಇದು ನಮ್ಮ ನಿಮ್ಮ ಪ್ರತಿಷ್ಠೆಯ ಪ್ರಶ್ನೆಯಲ್ಲ. ಇದನ್ನು ಮತ್ತೆ ತರಲಿಕ್ಕೆ ಅವಕಾಶವಿದೆ. ಮಾನ್ಯ ಸಚಿವರು ತಾವು ಮಾತನಾಡುವಾಗ ಬಹಳ ಬಿಚ್ಚು ಮನಸ್ಸಿನಿಂದ ಮಾತನಾಡಿದರು. ಅವರ ಮಾತನ್ನು ಕೇಳಿ ನನಗೆ ಸಂತೋಷವಾಯಿತು. ಇನ್ನೂ ಸ್ವಲ್ಪಮುಂದೆ ಹೋಗಿ ಚರ್ಚೆ ಮಾಡುವುದಕ್ಕೆ ಬದಲು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸಿ ತನ್ಮೂಲಕ ಹೊಸ ವಿಚಾರಗಳನ್ನು ಚರ್ಚಿಸಿ ಒಂದು ಹೊಸ ರೂಪದಲ್ಲಿ ಬರಲಿ ಎಂದು ನನ್ನ ಸಲಹೆ. ಅದಕ್ಕೆ ತಾವು ಅನುಕೂಲಮಾಡಿಕೊಡಿ.

ಶ್ರೀ ಬಿ. ಬಸವಲಿಂಗಪ್ಪ : ಸಲಹೆಗಳ ಜೊತೆಗೆ ಇದು ಒಂದು ಸಲಹೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ತಂದಿರತಕ್ಕಂಥ ತಿದ್ದುಪಡಿಗಳನ್ನು ತಾವು ಪೂರ್ಣವಾಗಿ ವಾಪಸ್ ತೆಗೆದುಕೊಳ್ಳಿ. ಇದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸುವುದು ಅಗತ್ಯವಿಲ್ಲ. ಸದನದ ಸಮಿತಿಗೆ ಕಳುಹಿಸುವುದು ಅನಗತ್ಯ. ಅವಸರ ಅವಸರವಾಗಿ ಚರ್ಚೆಗೆ ತಂದು ಜನರಲ್ಲಿ ಗೊಂದಲ ಮಾಡಿ ಇದರ ಬಗ್ಗೆ ಚರ್ಚೆ ಮಾಡುವುದು ಅನಗತ್ಯ. ನೀವೇ ಗೊಂದಲದಲ್ಲಿರುವುದರಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಏನು ಅಗತ್ಯವಿದೆ. ಕೇಂದ್ರ ಸರ್ಕಾರ ಒಂದು ಸಮಗ್ರವಾದಂಥ ಕಾನೂನನ್ನು ತರಲು ವಿಚಾರ ಮಾಡುತ್ತಿರುವಾಗ ಈ ಸಂದರ್ಭದಲ್ಲಿ ಅನಗತ್ಯವಾದ ತಿದ್ದುಪಡಿಗಳನ್ನು ತಂದು ಹದಿನೈದು ದಿವಸ ಸಮಯ ಹಾಳುಮಾಡಿ ನಮ್ಮ ಬಗ್ಗೆ ಜನರಿಗೆ ಸಂಶಯ ಬರತಕ್ಕಂಥ ವಿಚಿತ್ರ ವಾತಾವರಣ ತರುವುದಕ್ಕಿಂತ ಸಂಪೂರ್ಣವಾಗಿ ಇದನ್ನು ವಾಪಸ್ ತೆಗೆದುಕೊಳ್ಳಿ. ಏತಕ್ಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಬಂದು ಕುಳಿತುಕೊಂಡು ಯೋಚನೆ ಮಾಡುವಂಥ ಸ್ಥಿತಿಗೆ ತಂದು ಮತ್ತೆ ನಿಮ್ಮ ನಾಯಕರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಡಿಪಾರ್ಟ್‌ಮೆಂಟ್‌ನವರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಈ ರೀತಿಯಾಗಿ ಜಗತ್ತಿನಲ್ಲಿ ಇತಿಹಾಸದಲ್ಲಿಯೇ ಯಾರು ಸಹ ಇಂತಹ ತಿದ್ದುಪಡಿಗಳನ್ನು ತಂದಿಲ್ಲ. ದಯವಿಟ್ಟು ಇದನ್ನು ಗೌರವದಿಂದ ವಾಪಸ್ ತೆಗೆದುಕೊಳ್ಳಿ. ಜನರೂ ನಿಮಗೆ ಗೌರವ ಕೊಡುತ್ತಾರೆ. ಜಂಟಿ ಸಲಹಾ ಸಮಿತಿಗೆ ಏತಕ್ಕೆ ಇದನ್ನು ಕಳುಹಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಯಡಿಯೂರಪ್ಪನವರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಬೇರೆ ಎಲ್ಲ ಸಲಹೆಗಳ ಜೊತೆಗೆ ಅವರದು ಒಂದು ಸಲಹೆ. ಅವರು ಯಾರ ಅಭಿಪ್ರಾಯವನ್ನು ತೆಗೆದುಕೊಂಡಿಲ್ಲ. ಕ್ಯಾಬಿನೆಟ್ ಸಲಹೆಯನ್ನು ತೆಗೆದುಕೊಂಡಿಲ್ಲ. ಲಾ ಡಿಪಾರ್ಟ್‌ಮೆಂಟ್ ಅಭಿಪ್ರಾಯವನ್ನು ತೆಗೆದುಕೊಂಡಿಲ್ಲವೆನ್ನುವ ಮಾತನ್ನು ಹೇಳಿದರು. ಅದು ಬುಡವಿಲ್ಲದ ಮಾತು. ಲಾ ಡಿಪಾರ್ಟ್‌ಮೆಂಟ್ ಒಪೀನಿಯನ್ ಇಲ್ಲದೆ ಇದನ್ನು ತರಲು ಆಗುವುದಿಲ್ಲ. ಮಾನ್ಯ ಬೈರೇಗೌಡರನ್ನು ಕೇಳಿ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ಅದನ್ನೂ ಕೂಡ ಸಲಹೆಯ ರೂಪದಲ್ಲಿ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಯ ತಿದ್ದುಪಡಿ ಮಸೂದೆಯನ್ನು ಸರ್ಕಾರ ಮತ್ತು ಮಾನ್ಯ ಸಚಿವರು ನಮ್ಮ ಒಪ್ಪಿಗೆಗೋಸ್ಕರ ಏನು ಮಂಡನೆಯನ್ನು ಮಾಡಿದ್ದರು ಇದನ್ನು ನಾವು ಸಾರಾಸಗಟಾಗಿ ಏನೂ ವಿರೋಧ ಮಾಡಿರಲಿಲ್ಲ. ನಾನು ಸ್ಪಷ್ಟವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮೀಸಲಾತಿಯ ವಿಚಾರದಲ್ಲಿ, ಜಿಲ್ಲಾ ಪರಿಷತ್ತಿನ ಅದ್ಯಕರು ಮತ್ತು ಉಪಾಧ್ಯಕ್ಷರು, ಪ್ರಧಾನರು ಮತ್ತು ಉಪಪ್ರಧಾನರ

ಸ್ಥಾನಕ್ಕೆ ಮೀಸಲಾತಿ ಇಡಬೇಕು ಎನ್ನುವ ವಿಚಾರದಲ್ಲಿ ಏನು ತಾವು ಮಂಡನೆ ಮಾಡಿದ್ದೀರಿ ಅದರಲ್ಲಿ ಅನೇಕ ಜನರು ಬೆಂಬಲ ಕೊಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ನಾನು ಇವತ್ತು ತಮ್ಮನ್ನು ಅಭಿನಂದಿಸುತ್ತಿದ್ದೇನೆ. ಮಾನ್ಯ ಜಾಲಪ್ಪನವರು ಹೇಳಿದಹಾಗೆ ರಿಸಲ್ಟ್ ಬಹಳ ಮುಖ್ಯವಾದುದು. ಇವತ್ತು ಇದರಿಂದ ಸಮಯ ವ್ಯರ್ಥವಾಗಿದೆ ಎಂದು ನನಗಂತೂ ಅನ್ನಿಸಿಲ್ಲ. ಕಳೆದ 15-20 ವರ್ಷಗಳಲ್ಲಿ ನಾವು ಚರ್ಚೆಮಾಡಿದ್ದರೆ, ಈ ರಾಜ್ಯದ ಗ್ರಾಮೀಣ ಜನತೆಯ ಬದುಕಲ್ಲಿ ಬದುಕನ್ನು ಹಸನು ಮಾಡಲಿಕ್ಕೆ ಒಂದು ಹೊಸ ಕಾನೂನು ಮಾಡುವುದರಲ್ಲಿ ಸಮಯದ ವ್ಯರ್ಥದ ಪ್ರಶ್ನೆ ಬರುವುದಿಲ್ಲ. ಅದಕ್ಕಿಂತ ಮಹತ್ತರವಾಗಿ ನಾವು ಮಾಡತಕ್ಕದ್ದು ಏನೂ ಸಹಿತ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಎಲ್ಲಿಂದ ಬೇಕಾದರೂ ಸೂಚನೆ ಬಂದಿರಲಿ. ನಿಮ್ಮ ಪಕ್ಷದ ಅಧ್ಯಕ್ಷರಿಂದ ಬಂದಿರಲಿ, ಮತ್ತೊಬ್ಬರಿಂದ ಬಂದಿರಲಿ. ನೀವು ಅದನ್ನು ಬಿಚ್ಚು ಮನಸ್ಸಿನಿಂದ ಹೇಳಿರತಕ್ಕದ್ದನ್ನು ನಾನು ಒಪ್ಪುತ್ತೇನೆ. ನಾನು ಇಷ್ಟೇ ಹೇಳತಕ್ಕದ್ದು. ಈ ತಿದ್ದುಪಡಿ ಮಸೂದೆ ಮಂಡನೆ ಮಾಡಿದಾಗ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಿ ನಾನೂ ಸಹ ಅದಕ್ಕೆ ಒಂದು ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದೆ. ಇದನ್ನು ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಲು ಚರ್ಚೆಗೆ ಇಡೋಣ ಎರಡು ಮೂರು ತಿಂಗಳಾದಮೇಲೆ ಮತ್ತೆ ಅಧಿವೇಶನ ಸೇರಿದಾಗ ಇದರ ಬಗ್ಗೆ ಚರ್ಚೆ ಮಾಡಬಹುದು ಎಂದು ಹೇಳಿದ್ದೆ. ಅದಕ್ಕೆ ದಯವಿಟ್ಟು ಸರ್ಕಾರ ಅವಕಾಶ ಮಾಡಿಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮುಗಿದ ವಿಷಯದ ಮೇಲೆ ಚರ್ಚೆ ಏತಕ್ಕೆ? ಚರ್ಚೆ ಅನಾವಶ್ಯಕ. ಸದನದ ವೇಳೆ ವ್ಯರ್ಥವಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಗಡಿ ಪ್ರದೇಶದ ಜನರ ಬಗ್ಗೆ ತಮಗೆ ಒಂದು ಪತ್ರ ಬರೆದಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ : ಇರಿ.

ಶ್ರೀ ವಾಟಾಳ್ ನಾಗರಾಜ್ : ಆದಾಯಿತು. ಅದು ಮುಗಿಯಿತಲ್ಲ, ಅಧ್ಯಕ್ಷರೆ, ತಮಗೆ ಪತ್ರ ಕಳುಹಿಸಿದ್ದೇನೆ. ಸೊಲ್ಲಾಪುರದ ಗಡಿ ಕನ್ನಡಿಗರು 800 ಕಿಲೋಮೀಟರ್ ದೂರದಿಂದ ಬಂದಿದ್ದಾರೆ. ಅವರ ಬೇಡಿಕೆಗಳಲ್ಲಿ ಕರ್ನಾಟಕದಲ್ಲಿರತಕ್ಕ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಕೊಡಬೇಕು ಎಂಬುದು ಒಂದು. ಎರಡನೆಯದು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಬೆಳಗಾವಿ ಮಹಾನಗರ ಪಾಲಿಕೆ ಮೇಲೆ ಇರತಕ್ಕ ಮರಾಠಿ ಧ್ವಜ ತೆಗೆಯಬೇಕು ಎಂದು ಹೇಳಿ ಅನೇಕ ಸಾರಿ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದ್ದೇವೆ. ಇದಕ್ಕೆ ಈ ಸದನದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಉತ್ತರ ಕೊಟ್ಟಿದ್ದಾರೆ. ಇವತ್ತೂ ಕೂಡ ಮರಾಠಿ ಧ್ವಜವೇ ಅಲ್ಲಿ ಹಾರಾಡುತ್ತಿದೆ. ಅದನ್ನು ತೆಗೆಯುವುದಕ್ಕೆ ತಯಾರಾಗಿಲ್ಲ. ಅಲ್ಲಿಂದ ಇವತ್ತು ಜನ ಬಂದಿದ್ದಾರೆ. ಬೇರೆ ಬೇರೆ ಭಾಷೆಯವರಿಗೆ ಕರ್ನಾಟಕದಲ್ಲಿ ಉದ್ಯೋಗ ಕೊಡುತ್ತಿದ್ದೇವೆ. ಆದರೆ ಕನ್ನಡಿಗರೇ ಆದ ಅಕ್ಕಲಕೋಟೆ, ತಾಳವಾಡಿ, ಜತ್ತ ಇಂಥ ಅನೇಕ ಗಡಿ ಪ್ರದೇಶದಲ್ಲಿರತಕ್ಕ ಜನರಿಗೂ ಕನಿಷ್ಟ ಶೇಕಡ 5ಭಾಗವನ್ನಾದರೂ ಉದ್ಯೋಗವನ್ನು ಮೀಸಲಾತಿ ಇಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತಿದ್ದೇನೆ. ಇದುವರೆಗೂ ಬಾವುಟ ತೆಗೆದಿಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಾವುಟದ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ?

ಏನು ನಿರ್ಧಾರ ತೆಗೆದುಕೊಂಡಿದ್ದೀರಿ ನೀವು? ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದೀರಿ. ತಾವು ಹೇಳಿ. ಕನ್ನಡ ಭಾಷೆ ಬಗ್ಗೆ ನಿಮಗೆ ಒಂದು ನೀತಿ ಇದ್ದರೆ, ಒಂದು ನಿಲುವು ಇದ್ದರೆ, ಒಂದು ಸ್ಪಷ್ಟತೆ ಇದ್ದರೆ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯಮಾಡಿ ಅದನ್ನು ಹೇಳಬೇಕು ಎಂದು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಸರೋಜಿನಿ ಮಹಿಷಿ ವರದಿ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಜಾರಿಗೆ ತರುತ್ತೇವೆಂದು ಕಳೆದ ಒಂದು ವರ್ಷದಿಂದ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಸರ್ಕಾರ ಮರಾಠಿ ಧ್ವಜವನ್ನು ತೆಗೆಯುತ್ತಾರೋ ಇಲ್ಲವೋ ಎಂಬುದನ್ನು ಹೇಳಬೇಕು. ಒಂದು ವರ್ಷದಿಂದ ಕೇಳುತ್ತಿದ್ದೇವೆ. ಸೊಲ್ಲಾಪುರದವರು ಬಂದು ಕೇಳುತ್ತಾರೆ. ಕನ್ನಡದ ಬಗ್ಗೆ ಬಹಳ ಕಳಕಳಿ ಇದೆ ಎಂದು ಹೇಳುತ್ತಾರೆ. ಭಾರಿ ದೊಡ್ಡ ಟಮಟೆ ಹೊಡೆಯುತ್ತಾರೆ. ನಾಳೆ ಕನ್ನಡ ಸಾಹಿತ್ಯ ಸಮ್ಮೇಳನ ಮೂರು ದಿವಸ ನಡೆಯುತ್ತಿದೆ. ಏತಕ್ಕೆ ನಡೆಯಬೇಕು? ಕರ್ನಾಟಕ ಸರ್ಕಾರದಲ್ಲಿ ಕನ್ನಡದ ಬಗ್ಗೆ ಕಳಕಳಿ ಇಲ್ಲ ಎಂದರೆ ಸಮ್ಮೇಳನ ಏತಕ್ಕೆ ನಡೆಯಬೇಕು? ಯಾವ ಉದ್ದೇಶಕ್ಕೋಸ್ಕರ ನಡೆಸಬೇಕಾಗಿದೆ?

ಅಧ್ಯಕ್ಷರು : ಸಮ್ಮೇಳನ ನಡೆಸುವವರೇ ಬೇರೆ, ಸರ್ಕಾರ ನಡೆಸುವವರೇ ಬೇರೆ.

ಶ್ರೀ ವಾಟಾಳ್ ನಾಗರಾಜ್ : ಕನ್ನಡದ ಬಗ್ಗೆ ಕಳಕಳಿ ಇಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಕನ್ನಡದ ಬಗ್ಗೆ ಕಳಕಳಿ ಇಲ್ಲ ಎಂದು ಯಾರು ಹೇಳಿದರು

ಶ್ರೀ ವಾಟಾಳ್ ನಾಗರಾಜ್ : ಗಡಿ ಬಗ್ಗೆ ಕಳಕಳಿ ಇಲ್ಲ, ಒಂದು ನೀತ ಇಲ್ಲ.

ಅಧ್ಯಕ್ಷರು : ಗಡಿ ಬಗ್ಗೆಯೂ ನೀತಿ ಇದೆ, ಕನ್ನಡ ಬಗ್ಗೆನೂ ನೀತಿ ಇದೆ, ಕಳಕಳಿಯ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳುವುದು ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ...

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಮಂತ್ರಿಗಳು ಹಿಂದೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸಿದರೆ ಸಾಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬಾವುಟದ ಬಗ್ಗೆ ಕಾನೂನಿನ ಅವಶ್ಯಕತೆ ಇದ್ದರೆ ತಿದ್ದುಪಡಿ ತರುತ್ತೇವೆಂದು ಮಾನ್ಯ ಸಚಿವರು ಹೇಳಿದ್ದರು. ಚುನಾವಣೆಗಳನ್ನು ಮುಂದೆ ಹಾಕುವುದಕ್ಕೆ ಸರ್ಕಾರಕ್ಕೆ ಮತ್ತಷ್ಟು ಶಕ್ತಿ ಬೇಕೆಂದು ನಗರಸಭೆ, ಪುರಸಭೆಗಳ ಕಾನೂನಿಗೆ ತಿದ್ದುಪಡಿಯನ್ನು ನಾವು ವಿರೋಧ ಮಾಡಿದರೂ ತಾವು ಪಾಸ್ ಮಾಡಿಕೊಂಡು ಅಧಿಕಾರವನ್ನು ತೆಗೆದುಕೊಂಡಿರಿ. ಅದೇ ರೀತಿ ಬೆಳಗಾಂನಲ್ಲಿ, ಅದೂ ಜಿಲ್ಲಾ ಕೇಂದ್ರದಲ್ಲಿ ಧ್ವಜ ಹಾಕಿರುವುದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅದಕ್ಕೆ ಮಸೂದೆ ತರುತ್ತೇವೆನ್ನುವ ವಿಚಾರ ಹೇಳಿದ್ದೀರಿ. ಆ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡ ಹಾಗೆ ಕಾಣಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಕನ್ನಡದ ಕಳಕಳಿಯ ನೀತಿಯ ಬಗ್ಗೆ ವಾಟಾಳ್ ನಾಗರಾಜ್‌ರವರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತಲೂ ಕಡಿಮೆಯಂತೂ ನಮಗೆ ಇಲ್ಲ. ಆದರೆ ಮಾತನಾಡುವಾಗ ತಮ್ಮಲ್ಲಿ ಸ್ವಲ್ಪ ತೀವ್ರತೆ ಜಾಸ್ತಿ ಇದೆ, ಮಾತನಾಡುವಾಗ ನಮಗೆ ಕಡಿಮೆ ಇರಬಹುದು. ಆದರೆ ಅನುಷ್ಠಾನದಲ್ಲಿ ನಮ್ಮದೇನೂ ಕಡಿಮೆ ಇಲ್ಲ, ಕೆಲವು ಸಾರಿ ಮಾತನಾಡಿದರೆ ತೊಂದರೆ ಜಾಸ್ತಿಯಗುತ್ತದೆ. ಕೆಲಸ ಮಾಡಿದಾಗ ಸ್ವಲ್ಪ ಜಾಸ್ತಿ ಕೆಲಸ ಆಗುತ್ತದೆ. ವ್ಯತ್ಯಾಸ ಅಷ್ಟೆ. ಇವತ್ತು ಧ್ವಜದ ವಿಚಾರ ಇದೆ. ಈ ಧ್ವಜದ ವಿಚಾರದಲ್ಲಿ ಏನೇ ಕಾನೂನು ತರಬೇಕಾದರೂ ಸಹ ಅದು ಕೇಂದ್ರ ಸರ್ಕಾರದ ಸೆಂಟ್ರಲ್ ಲಿಸ್ಟ್‌ನಲ್ಲಿ ಬರುತ್ತದೆ. ಫ್ಲಾಗ್ ಬಗ್ಗೆ ಕೇಂದ್ರಕ್ಕೆ ಸೇರಿದ್ದು. ಇದಕ್ಕೆ ನಮ್ಮ ಆಲೋಚನೆ ಏನೆಂದರೆ ಮುನಿಸಿಪಲ್ ಆಕ್ಟ್‌ನಲ್ಲಿ, ಜಿಲ್ಲಾಪರಿಷತ್ ಆಕ್ಟ್‌ನಲ್ಲಿ ಇದಕ್ಕೆ ಕಾನೂನು ತರುವುದಕ್ಕೆ ಸಾಧ್ಯ ಇದೆಯೇ ಇಲ್ಲವೇ ಎಂಬುದನ್ನು ಸರ್ಕಾರದ ಕಾನೂನು ಇಲಾಖೆ ಪರಿಶೀಲನೆ ಮಾಡುತ್ತಾನೇ ಇದೆ. ಇದಕ್ಕೆ ಅಂತಿಮ ಸ್ವರೂಪವನ್ನು ಕೊಡುವುದಕ್ಕೆ ಅವರಿಗೆ ಇನ್ನೂ ಕೂಡ ಸಾಧ್ಯವಾಗಿಲ್ಲ, ಏಕೆಂದರೆ ಇದು ಪೂರ್ತಿ ಹೊಸ ಕ್ಷೇತ್ರದಲ್ಲಿ ಕಾನೂನನ್ನು ಮಾಡತಕ್ಕದ್ದು. ಇಂತಹ ಕಾನೂನು ಇಲ್ಲಿಯವರೆಗೆ ಯಾವ ರಾಜ್ಯದಲ್ಲೂ ಇಲ್ಲ, ನಮ್ಮ ರಾಜ್ಯದಲ್ಲೂ ಕೂಡ ಇಲ್ಲ. ಆದರೆ ನೇರವಾಗಿ ಇಂತಹ ಒಂದು ಕಾನೂನು ಮಾಡಿದಾಗ ಒಂದು ರೀತಿಯಲ್ಲಿ ವೈಫಲ್ಯವಾದರೆ ಅದಕ್ಕಿಂತಲೂ ಹೆಚ್ಚು ಅನಾಹುತ ಇದರಲ್ಲಿ ಆಗುತ್ತದೆ.

ಶ್ರೀ ಸಿ. ಬೈರೇಗೌಡ : ಈಗ ಯಾವ ಕಾನೂನಿನ ಅಡಿಯಲ್ಲಿ ಅವರು ಆ ಬಾವುಟವನ್ನು ಹಾರಿಸಿದ್ದಾರೆ. ಅದಕ್ಕೆ ಕಾನೂನಿನ ಆಧಾರವಿಲ್ಲದಿದ್ದರೆ ತೆಗೆಸಿಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರು ಎತ್ತಿರತಕ್ಕ ಪ್ರಶ್ನೆ ನಿನ್ನೆ ಮೊನ್ನೆಯದಲ್ಲ ಅನೇಕ ವರ್ಷಗಳಿಂದ ಹಾರಿಸಿಕೊಂಡು ಬಂದಿದ್ದಾರೆ. ಇದರ ಬಗ್ಗೆ ಯಾವ ರೀತಿಯಾಗಿ ಕಾನೂನು ಮಾಡಬೇಕೆಂದು ನಾವು ನೋಡುತ್ತಿದ್ದೇವೆ. ನಾವು ಇದರ ಬಗ್ಗೆ ಕೊಟ್ಟ ಆಶ್ವಾಸನೆಯನ್ನು ಕೈಬಿಟ್ಟಿಲ್ಲ, ನಗರಾಭಿವೃದ್ಧಿ ಇಲಾಖೆಯವರು, ಜಿಲ್ಲಾಪರಿಷತ್ತಿನ ಅಧ್ಯಕ್ಷರು ಕೂಡಾ ಅವರಿಗೆ ಬೇಕಾದ ಹಾಗೆ ಧ್ವಜ ಉಪಯೋಗ ಮಾಡುತ್ತಿದ್ದಾರೆ. ಯಾವ ಕಛೇರಿಯಲ್ಲಿಯಾಗಲೀ, ಯಾವ ಜಿಲ್ಲಾಪರಿಷತ್ತಿನಲ್ಲಾಗಲೀ, ಮುನಿಸಿಪಾಲಿಟಿಯಲ್ಲಾಗಲೀ ಯಾವ ರೀತಿ ಬಾವುಟ ಉಪಯೋಗ ಮಾಡಬೇಕೆನ್ನುವುದರ ಬಗ್ಗೆ 2-3 ಸಾರಿ ಇದರ ಬಗ್ಗೆ ಸಮಾಲೋಚನೆ ಮಾಡಿದ್ದೇವೆ. ಕಾನೂನಿಗೆ ಅಂತಿಮ ಸ್ವರೂಪವನ್ನು ಕೊಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ, ತಡ ಆಗಿರುವುದಕ್ಕೆ ಕ್ಷಮೆಯೊಚನೆ ಮಾಡುತ್ತೇನೆ. ಇದರ ಬಗ್ಗೆ ವ್ಯಾಕ್ಯುಲತೆ ಇಲ್ಲ ಎಂದು ತಾವು...,

ಶ್ರೀ ಕೆ.ಹೆಚ್. ರಂಗನಾಥ್ : ತಾವು ಹೀಗೆ ಹೇಳಿದರೆ ಹೇಗೆ? ಇದು ಬಹಳ ಗಂಭೀರವಾದ ಪ್ರಶ್ನೆ ಇದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹಾಕಿಕೊಂಡುಬಿಟ್ಟರೆ ನಾವು ನಿವೀರ್ಯರು ಎಂದು ಕುಳಿತುಕೊಳ್ಳುವುದೇ? ಇದಕ್ಕೆ ಆಶ್ವಾಸನೆ ಏಕೆ ಬೇಕು ಈಗ? ಆ ಮುನಿಸಿಪಾಲಿಟಿಯವರನ್ನು ಮನೆಗೆ ಕಳುಹಿಸಿ ಈಗ. ಇಲ್ಲದಿದ್ದರೆ ಬೆಂಗಳೂರಿಗೆ ಬಂದು ಇಲ್ಲೂ ಧ್ವಜ ಹಾಕುತ್ತಾರೆ. ಸುಮ್ಮನೆ ಯೋಚನೆ ಮಾಡಿ ಕುಳಿತುಕೊಳ್ಳುವ ಪ್ರಶ್ನೆ ಇದಲ್ಲ. ಆಲೋಚನೆ ಎಂದರೆ ನಮ್ಮ ಲಾ ಡಿಪಾರ್ಟ್‌ಮೆಂಟ್‌ನವರು ಇನ್ನೂ 10 ವರ್ಷ ಯೋಚನೆ ಮಾಡುತ್ತಾರೆ. ನಾನು ಇಲ್ಲಿ ತಮ್ಮ ಕಳಕಳಿಯ ಬಗ್ಗೆ ಅನುಮಾನ ಪಡುತ್ತಾ ಇಲ್ಲ. ಆದರೆ ಇಷ್ಟು ತಡವಾಗಿ ನಾವು ಕಾರ್ಯಪ್ರವೃತರಾದರೆ ಕಷ್ಟವಾಗುತ್ತದೆ. ಇವರಿಗೆ ಒಂದು

ತರಹ ಧೈರ್ಯ ಬರುತ್ತದೆ. ಸರ್ಕಾರಕ್ಕೆ ಧೈರ್ಯ ಇಲ್ಲ, ತಾವು ಏನು ಬೇಕಾದರೂ ಮಾಡಬಹುದೆಂದು ಅವರು ಧೈರ್ಯತಾಳುತ್ತಾರೆ. ಆದ್ದರಿಂದ ತಕ್ಷಣ ತಾವು ಈ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಬಾಕಿ ವಿಚಾರಗಳನ್ನು ಬೇಕಾದರೆ ಅಚೆ ಇಡಿ. ಒಂದು 10-15 ದಿವಸ ಇದು ಏನು ಎಂಬುದನ್ನು ಯೋಚನೆ ಮಾಡಿ ತಜ್ಞರನ್ನು ಕರೆಸಿ ಏನು ವಿಚಾರ ಮಾಡಬೇಕೋ ಅದನ್ನು ಅವರ ಜೊತೆ ಮಾಡಬೇಕು. . ಅಷ್ಟರೊಳಗೆ ಆ ಮುನಿಸಿಪಾಲಿಟಿ ಅಧ್ಯಕ್ಷರಿಗೆ ನೀವು ಹೀಗೆ ಮಾಡಬಾರದು ಹೀಗೆ ಮಾಡಿದರೆ ಅಪರಾಧವಾಗುತ್ತದೆ, ಸೂಪರ್‌ಸೀಡ್ ಮಾಡುತ್ತೇವೆಂದು ಹೇಳಬೇಕು. ಆ ಆಶ್ವಾಸನೆಯನ್ನು ಹಿಂದಿನ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, 10 ವರ್ಷದಿಂದ ಇದರ ಬಗ್ಗೆ ಯಾರೂ ಆಲೋಚನೆ ಮಾಡಿಲ್ಲ, ತಾವು ಕೂಡ ಸರಕಾರದಲ್ಲಿ ಮೊನ್ನೆ ಮೊನ್ನೆಯವರೆಗೂ ಇದ್ದಿರಿ. ಹೊಸದಾಗಿ ನಾವು ನೀವೂ ಇದನ್ನು ಆಲೋಚನೆ ಮಾಡತಕ್ಕದ್ದು ಅಲ್ಲ, ತಡ ಒಂದು ವೇಳೆ ಆಗಿದ್ದರೆ....

ಶ್ರೀ ಕೆ.ಹೆಚ್. ರಂಗನಾಥ್ : ನಾನು ಕೂಡ ಸರಕಾರದಲ್ಲಿ ಇದ್ದವನು. ಅದಕ್ಕೆ ತಪ್ಪು ಮಾಡಬೇಕೆಂದು ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : I am not yielding. ಇದರಲ್ಲಿರುವ ಪ್ರಶ್ನೆ ಇಷ್ಟೆ. ಇದರ ಬಗ್ಗೆ 10 ವರ್ಷದಿಂದ ಆಲೋಚನೆ ಮಾಡುತ್ತಿಲ್ಲ, ಇದನ್ನು ಕೆಲವು ತಿಂಗಳುಗಳಿಂದ ಆಲೋಚನೆ ಮಾಡುತ್ತಿದ್ದೇವೆ. ಇದು ಕೆಲವು ತಿಂಗಳುಗಳಿಂದ ಪ್ರಾರಂಭವಾಗಿದೆ. ನಾನೂ ಕೂಡ ಹೇಳಿದ್ದೇನೆ. ಹಿಂದಿನ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಈ ಬಗ್ಗೆ ನಮಗೆ ಕಳಕಳಿ ಇದೆ. 10 ವರ್ಷದಿಂದ ಇದರ ಬಗ್ಗೆ ಯಾರೂ ಆಲೋಚನೆ ಮಾಡಿಲ್ಲ, ಕೆಲವು ತಿಂಗಳಿಂದ ಇದರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಇದಕ್ಕೆ ನಾನ ಕಾನೂನನ್ನು ಏಕೆ ತರಬಾರದು ಎಂದು. ಇದು ಕೆಲವು ತಿಂಗಳುಗಳಿಂದ ನಡೆಯುತ್ತಿದೆ. ಇದು ತಡವಾಗಿದೆ. ಹಿಂದೆ ಇದನ್ನು ಆಲೋಚನೆ ಮಾಡಿದ್ದರೆ ಇಂತಹ ಪ್ರಶ್ನೆ ಇಂದು ಉದ್ಭವವಾಗುತ್ತಿರಲಿಲ್ಲ. I am sorry. No steps have been taken.

ಆ ಧ್ವಜವನ್ನು ತೆಗೆಯತಕ್ಕಂಥದ ಯಾವ ನಿರ್ಣಯವನ್ನೂ ಸಹ ಯಾವ ಸಂದರ್ಭದಲ್ಲೂ ಕೂಡ ಯಾರೂ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ಚರ್ಚೆಯಾಗುವಾಗ ಮಾನ್ಯ ಅಧ್ಯಕ್ಷರ ಗಮನಕ್ಕೆ ಕೂಡ ಬಂದಿದೆ. ರಾಜಾಧಿಕಾರದ ಧ್ವಜವೇ ಹೋಯಿತು ಇನ್ನು ಈ ಧ್ವಜ ಏಕೆ ಅಲ್ಲಿ ಬೇಕು ಎಂದು ಅಧ್ಯಕ್ಷರು ಅಪ್ಪಣೆ ಕೂಡಿಸಿದ್ದಾರೆ. ತಾವೂ ಕೂಡ ಒಪ್ಪಿದ್ದೀರಿ ಮಾಡುತ್ತೇವೆಂದು ಹೇಳಿದ್ದೀರಿ. ಇದಕ್ಕೆ ಕಾಯಿದೆ ತರುತ್ತೇವೆಂದು ಈ ಸಭೆಯಲ್ಲಿ ಹೇಳಿದ್ದೀರಿ.

ಶ್ರೀ ಶಿವಾನಂದ ಹೆಚ್.ಕೌಜಲಗಿ : ನೀವು ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಿ.

ಅಧ್ಯಕ್ಷರು : ಮಾನ್ಯ ಕೌಜಲಗಿಯವರೇ, ನಿಮ್ಮ ಅವಸರಕ್ಕೆ ಯಾವ ಮಂತ್ರಿಗಳೂ ಕೂಡ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಬಹಳ ಅವಸರ. ಅವರು ಹೇಳತಕ್ಕಂಥಾದ್ದನ್ನು. ಪೂರ್ತಿ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಂದು ಅವಸರವಾಗಿ ಒಂದು ಕಾನೂನು ಮಾಡಿ ಅದರಿಂದ ವಿಫಲವಾಗುವುದರ ಬದಲು ಅವಸರ ಮಾಡಿ, ಕಾನೂನು ತಂದು ಮತ್ತೆ ವೈಫಲ್ಯತೆಯನ್ನು ಅನುಭವಿಸಿದರೆ ಅದರಿಂದ ಕನ್ನಡಕ್ಕೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ನಾವು ಅಂದರೆ ಸರಕಾರಕ್ಕೆ ತೀವ್ರವಾಗಿ ಆಲೋಚನೆ ಇದೆ. ಈ ಬಗ್ಗೆ ಕಾನೂನನ್ನು ತಂದೇ ತರುತ್ತೇವೆಂಬ ಭಾವನೆಯಿಂದಾಗಿ 2-3 ಸಾರಿ ಬೇರೆ ಬೇರೆ ಹಂತದಲ್ಲಿ ಚರ್ಚೆ ಮಾಡಿ ಬಂದಿದ್ದೇವೆ. ಆದರೆ ಅಂತಿಮ ಸ್ವರೂಪವನ್ನು ಕೊಡಲಿಕ್ಕೆ ಕಾನೂನು ಇಲಾಖೆಯಿಂದಾಗಲೀ, ಮುನಿಸಿಪಲ್ ಆಡಳಿತ ಇಲಾಖೆಯಿಂದಾಗಲೀ ಆಗಿಲ್ಲ. ಇದನ್ನು ಸಧ್ಯದಲ್ಲೇ ತರುತ್ತೇವೆ ಅಥವಾ ಕಾನೂನನ್ನು ತರುವುದಕ್ಕೆ ಆಗದಿದ್ದರೂ ಕೂಡ ವೀ ವಿಲ್ ಸಬ್‌ಮಿಟ್.

ಅಧ್ಯಕ್ಷರು : ಮಾನ್ಯ ರಂಗನಾಥ್‌ರವರು ಏನು ಅಭಿಪ್ರಾಯ ಪಟ್ಟರು ಎಂದರೆ ಬೆಳಗಾವಿ ಕಾರ್ಪೊರೇಷನ್ ಏನು ಇದೆ, ಅದೂ ಕೂಡ ನಮ್ಮ ಮುನಿಸಿಪಲ್ ಆಕ್ಟ್ ಅಡಿಯಲ್ಲಿ ಕೆಲಸ ಮಾಡುತ್ತಿದೆ. ನಾಳೆ ಬೆಳಗಾವಿ ಕಾರ್ಪೊರೇಷನ್‌ನವರು ಒಂದು ಧ್ವಜ, ಮಂಡ್ಯ ಸಿಟಿ ಮುನಿಸಿಪಾಲಿಟಿಯವರು ಮತ್ತೊಂದು ಧ್ವಜ ಹೀಗೆ ಒಬ್ಬೊಬ್ಬರು ಒಂದೊಂದು ಧ್ವಜವನ್ನು ಅವರ ಕಚೇರಿಯ ಮೇಲೆ ಹಾಕಿಕೊಳ್ಳುವುದರ ಮೇಲೆ ಏನಾದರೂ ನಿರ್ಬಂಧ, ಏನಾದರೂ ಗೊತ್ತುವಳಿ, ಏನಾದರೂ ಯೂನಿಫಾರ್ಮಿಟಿ ತರಬೇಕಾಗಿರತಕ್ಕಂಥಾದ್ದು ಅವಶ್ಯಕ. ಹಿಂದಿನ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಇದರ ಬಗ್ಗೆ ಸರಕಾರ ತೀವ್ರವಾಗಿ ಆಲೋಚನೆ ಮಾಡಿ ಇದರ ಸುಧಾರಣೆಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಹಾಗೆ ಅಂತ ಆಶ್ವಾಸನೆ ಕೊಟ್ಟಿದ್ದು ನನಗೆ ನೆನಪಿನಲ್ಲಿದೆ. ನಾನು ಸೂಚನೆಯನ್ನು ಮಾನ್ಯ ಸಚಿವರಿಗೆ ಮಾಡತಕ್ಕಂಥಾದ್ದು ಏನೆಂದರೆ, ಮುನಿಸಿಪಾಲಿಟಿ, ಹೆಚ್‌ಯು.ಡಿ. ಮತ್ತು ಫ್ಲಾಗ್ ಕೋಡ್ ಎಂದು ಕೇಂದ್ರ ಸರಕಾರದ್ದು ಬೇರೆ ಇದೆ. ಅದನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ಮುನಿಸಿಪಾಲಿಟೀಸ್‌ಗಳಿಗೆಲ್ಲರಿಗೂ ಅನ್ವಯಿಸತಕ್ಕಂತಹ ಒಂದು ನೀತಿಯನ್ನು ನೀವು ಮುಂದಿನ ಅಧಿವೇಶನದಲ್ಲಿ ಇದರ ಬಗ್ಗೆ ತರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ತಮಗೆ ಹೇಳುತ್ತಿದ್ದೇನೆ, ಈಗ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 800 ಕಿಲೋಮೀಟರ್ ದೂರದಿಂದ ಸೊಲ್ಲಾಪುರದ ಗಡಿಭಾಗದಿಂದ ಆ ಪ್ರಾಂತ್ಯದಿಂದ ಜನರು ಬಂದಿದ್ದಾರೆ. ನಮ್ಮ ಸರ್ಕಾರದಲ್ಲಿ ಅವರಿಗೂ ಸಹ ಅಂದರೆ ಹೊರನಾಡ ಕನ್ನಡಿಗರಿಗೂ ಕೆಲವು ಮೀಸಲಾತಿ ಉದ್ಯೋಗವನ್ನು ಇರಬೇಕೆಂಬುದು ಸರ್ಕಾರದ ಗಮನಕ್ಕೆ ಬರಬೇಕು.

ಅಧ್ಯಕ್ಷರು : ಈ ಬಗ್ಗೆ ತಾವು ಕಾಗದವನ್ನು ಬರೆಯಿರಿ.

ಶ್ರೀ ವಾಟಾಳ್ ನಾಗರಾಜ್ : ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ರೈಲ್ವೆ ತಾಂತ್ರಿಕ ಶಾಲೆಗೆ 1 ಕೋಟಿ ಇಲ್ಲವೇ 2 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಅನುದಾನದ ರೂಪದಲ್ಲಿ ಕೇಂದ್ರ ಸರ್ಕಾರ ಕೊಡಬೇಕೆಂದಿದೆ. ಅದು ತಿರುಚಾನಪಳ್ಳಿಗೆ ಹೋಗುತ್ತಾ ಇದೆ. ಈ ಬಗ್ಗೆ ಸರ್ಕಾರದ ನೀತಿ ಕನ್ನಡಿಗರಿಗೆ ಒಲವಾಗಿಲ್ಲ. ಆದ್ದರಿಂದ ಸರ್ಕಾರದ ಈ ಕನ್ನಡ ವಿರೋಧಿ ನೀತಿಯನ್ನು ನಾನು ವಿರೋಧಿಸಿ ಕಪ್ಪು ಧ್ವಜವನ್ನು ಬಹಿರಂಗವಾಗಿ ಈ ಸಭೆಯಲ್ಲಿ

ಪ್ರದರ್ಶಿನ ಮಾಡಿ ನಾನು ಧರಣಿ ಕುಳಿತುಕೊಳ್ಳಬೇಕೆಂದು ಮಾಡಿದ್ದೇನೆ. ಇದು ಸರಿಯಾದ ನೀತಿಯಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ನನ್ನ ಮಾತನ್ನು ಕೇಳಿ. ನಿಮಗೆ ನೋವಾದಾಗಲೆಲ್ಲ ದಯವಿಟ್ಟು ಧರಣಿ ಮಾಡಬೀಡಿ. ನಿಮಗೆ ನೋವು ಆಗಿಂದಾಗ್ಗೆ ಆಗುತ್ತಿರುತ್ತದೆ. ತಾವು ಧರಣಿ ಮಾಡುವುದು ಬೇಡ. ಏತಕ್ಕೆ ಧರಣಿ ಸುಮ್ಮನೆ? ನಿಮ್ಮ ಮಾತಿನ ಬಗ್ಗೆ ಕಳಕಳಿಯಿದೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ತಮ್ಮ ಪೀಠದಿಂದ ಎದ್ದು ಅಧ್ಯಕ್ಷರ ಪೀಠದ ಮುಂದೆ ಬಂದು ಕುಳಿತುಕೊಂಡರು)

(ಗೊಂದಲ)

ಅಧ್ಯಕ್ಷರು : ಆಲ್ ರೈಟ್ ಮಾನ್ಯ ಕಂದಾಯಮಂತ್ರಿಗಳು.

1990ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, 1990ನೇ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಕೊಳ್ಳುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಸಾಧ್ಯವಿಲ್ಲ, ಇಲ್ಲ, ಇಲ್ಲ ಸಾಧ್ಯವಿಲ್ಲ. ಮಾನ್ಯ ವಿರೋಧಪಕ್ಷದ ಉಪನಾಯಕರೇ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಬಿಲ್ ಇದೆ, ಅದು ಮುಗಿಯಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಸ್ವಲ್ಪ ಕೇಳಿ, ನಾಳೆ ಕನ್ನಡ ಸಾಹಿತ್ಯ ಸಮ್ಮೇಳನವಿದೆ, ಸಂತೋಷದಿಂದ ಈ ಸಭೆಯಿಂದ ವಿರಮಿಸೋಣವೆಂದರೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ತಾವು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಮುಂದಿನ ಅಧಿವೇಶನ ಸೇರುವುದರೊಳಗೆ ಬೆಳಗಾವಿ ಮಹಾನಗರ ಪಾಲಿಕೆಯವರು ಹಾಕಿಕೊಂಡಿರತಕ್ಕ ಬಾವುಟದ ಬ್ಯಾಕ್‌ಗ್ರೌಂಡ್‌ನಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ತಾವು ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟಿದ್ದೀರಿ, ಅದಕ್ಕೆ ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ತಾವು ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಅದಕ್ಕೆ ನಾವು ಅಭಿನಂದಿಸುತ್ತೇವೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ. ಅಂದರೆ ಸೊಲ್ಲಾಪುರದಿಂದ 800 ಕಿಲೋಮೀಟರ್ ದೂರದಿಂದ ಏನು ಜನರು ಬಂದಿದ್ದಾರೆ ಅವರಿಗೆ ಒಂದು ಭರವಸೆ ಬೇಕು. ಮಾನ್ಯ ಮಂತ್ರಿಗಳು